ದಿನಾಂಕ 18/09/2015 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಜಿ.ಎಸ್. ವಕೀಲರಿಂದ

3) ಪ್ರತಿವಾದಿ 1, 10, 11, 12 ಮತ್ತು ಮೃತ ರಘು ರವರು ಬರೆದುಕೊಟ್ಟಿದ್ದ ರದ್ದುಪಡಿಸಲಾಗದ ಸಾಮಾನ್ಯ ಅಧಿಕಾರ ಪತ್ರದ ಆಧಾರದ ಮೇಲೆ ಪ್ರತಿವಾದಿ 13 ಮತ್ತು 14 ರವರು ತಾಃ 07-05-2005 ರಿಂದ ಸ್ವಾಧೀನದಲ್ಲಿದ್ದಾರೆಂದರೆ ಸುಳ್ಳು. ದಾವಾ ಸ್ವತ್ತು ಪ್ರತಿವಾದಿ 1, 10, 11, 12 ಮತ್ತು ಮೃತ ರಘು ರವರ ಜಂಟಿ ಸ್ವಾಧೀನದಲ್ಲಿತ್ತು ಎಂದರೆ ನಿಜ. ಅವರು ಜಂಟಿ ಸ್ವಾಧೀನದಲ್ಲಿದ್ದಾಗಲೇ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆಂದರೆ ಸುಳ್ಳು. ಆದ್ದರಿಂದ ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು, ಅಧಿಕಾರ ಇರುವುದಿಲ್ಲ ಎಂದರೆ ಸುಳ್ಳು. ಆದ್ದರಿಂದ ದಾವಾದಲ್ಲಿ ಕೇಳಿರುವ ಪರಿಹಾರಕ್ಕೆ ನಾವು ಅರ್ಹರಲ್ಲ ಎಂದರೆ ಸುಳ್ಳು. ದಾವಾ ಸ್ವತ್ತನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾವಾ ಹಾಕಿದ್ದೇವೆಂದರೆ ಸುಳ್ಳು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಒ.

(ಎನ್.ಕೃಷ್ಣಯ್ಯ)
ಸೀನಿಯರ್ ಸಿವಿಲ್ ಜಡ್ಜ್
ಅರಕಲಗೂಡು.